ಶ್ರೀ ಎಂ. ಎಸ್. ಕೃಷ್ಣನ್.—ಅವರು ಎಷ್ಟು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟು ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಅವರು ಕೇಳಿದರು. ಅದಕ್ಕೆ ತಮ್ಮ ಅಭಿಪ್ರಾಯ ಏನು ಎಂದು ಅವರು ಕೇಳಲಿಲ್ಲವೇ? ಮತ್ತು ತಾವು ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೀರಾ ಎಂದು ನಮಗೆ ತಿಳಿದು ಬಂದಿದೆ. ಆದ್ದರಿಂದ ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಾಗ ಎಷ್ಟು ಕೊಡಬೇಕು ಎನ್ನುವ ಪ್ರಶ್ನೆಯೇ ಇಲ್ಲ.

Sri M. S. KRISHNAN.—Supplementary to (B) : Can I take it that even if afirm indication is given, the Government is not going to spare any electricity to the Tamil Nadu Government ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮಲ್ಲಿಯೇ ವಿದ್ಯುಚ್ಛಕ್ತಿ ಇಲ್ಲದೇ ಇರುವಾಗ ಬೇರೆಯವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಸಿ. ಬೈರೇಗೌಡ.—ಹಿಂದೆ ತಾವು ತುಂಗಭದ್ರಾದಿಂದ ಆಂಧ್ರಪ್ರದೇಶಕ್ಕೆ ನೀರು ಕೊಡುವುದಿಲ್ಲ ಎಂದು ಕ್ಯಾಬಿನೆಟ್ ತೀರ್ಮಾನ ಮಾಡಿ ಆ ಮೇಲೆ ಒಂದು ವಾರದ ನಂತರ ತಾವು ತೀರ್ಮಾನ ಮಾಡಿ ಆಂಧ್ರಕ್ಕೆ ನೀರನ್ನು ಬಿಟ್ಟಿದ್ದೀರಿ. ಈ ಸಂದರ್ಭದಲ್ಲಿ ತಾವು ಆ ರೀತಿ ನಡೆದುಕೊಳ್ಳುವುದಿಲ್ಲ ಎಂದು ಈ ಸದನಕ್ಕೆ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಪ್ಪೊತ್ತು ನಂಬಿಕೆ ಇರುವಾಗ ಭರವಸೆ ಕೊಟ್ಟು ಏನು ಪ್ರಯೋಜನ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನ್ಯಾಯ (ಈ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ತಮಿಳುನಾಡು ಸರ್ಕಾರದ ಹಾಗೂ ಆ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಪ್ರತಿನಿಧಿಗಳು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದಾಗ ತಮಿಳುನಾಡಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೆಂದು ಮುಖತಃ ಕೋರಿದ್ದರು ಎಂದು ಹೇಳಿದ್ದೀರಿ, ಅವರು ಆ ರೀತಿ ಕೇಳಿದಾಗ ತಾವು ಮುಖತಃ ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಏತಕ್ಕೆ ಹೇಳಲಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಕೊಡುತ್ತೇವೆ ಎಂದು ಹೇಳಲಿಲ್ಲ.

Mr. DEPUTY SPEAKER.—Now Question Hour is over

QUESTIONS FOR ANSWERS ON THE DAY

(But not taken up)

Ranebennur T.A.P.C. Marketing and Processing Society Ltd.

366. Sri K. B. KOLIWAD (Ranebennur).—

Will the Minister for Co-operation be pleased to state :—

(a) whether the Government is aware that all the books of Ranebennur Taluk Agriculture Produce Co-operative Marketing and Processing Society Ltd., are not recovered from the old management ;

(b) if so, the steps the Government has taken to recover the books ;

Sri A. SHANKARA ALVA (Minister for Co-operation).—

(a) Yes.

(SRI A. SHANKARA ALVA)

(*b*) The Administrator appointed for the society has taken action under section 31 of the Mysore Co-operative Societies Act, 1959 to obtain a search warrant from the I Class Magistrate.

Irrigation works in Magadi Taluk

389. Sri H. G. CHANNAPPA (Magadi).—

Will the Minister for Public Works and Electricity be pleased to state:—

the stage of the irrigation works sanctioned in Magadi Taluk such as:

(i) Hutchahanume Gowdana Palya Tank,

(ii) Gollarahatti Tank

(iii) Restoration of Agalabathi Tank?

Sri H. M. CHANNABASAPPA (Minister for Public Works and Electricity).—

(i) Hutchahanume Gowdana Palya Tank is proposed to be dropped since it is technically infeasible.

(ii) Gollarahatti Tank is proposed to be dropped since it is technically infeasible.

(iii) Restoration of Agalabathi Tank—the estimate is not sanctioned.

Rural Communication Roads in Magadi Taluk

390. Sri H. G. CHANNAPPA (Magadi).—

Will the Minister for Public Works and Electricity be pleased to state:—

(*a*) whether it is not the policy of the Government to improve 80 K.ms. of Rural Communication road under comprehensive integrated Rural Communication Scheme;

(*b*) if so, the extent of mileage approved for Magadi Taluk;

(*c*) the reasons for the shortfall?